ಬಳಿದುಕೊಂಡಿದ್ದ. ರುದ್ರಾಕ್ಷಿಯ ಮಾಲೆಯೊಂದು ಕೊರಳನ್ನು ಅಲಂಕರಿಸಿತ್ತು.

ಖುತು ಆ ಸನ್ಯಾಸಿಯನ್ನು ನೋಡುವಾಗಲೇ ರಮ್ಯಾಳು ಅವನತ್ತ ನೋಡಿದಳು. ಅವರಿಬ್ಬರೂ ತನ್ನನ್ನು ನೋಡುತ್ತಿದ್ದಾರೆಂದು ಅರಿವಾದೊಡನೆ ಆತ ಮೇಲೆದ್ದು ವೇಗದ ಹೆಜ್ಜೆ ಹಾಕುತ್ತಾ ಹೊರಗೆ ನಡೆದುಬಿಟ್ಟ.

'ಖುತು, ನೋಡಿದ್ಯಾ, ಯಾರೋ ನಿನ್ನನ್ನು ಹಿಂಬಾಲಿಸ್ತಾನೇ ಇದ್ದಾರೆ, ಆದ್ರೆ ಒಂದಂತೂ ಕ್ಲಿಯರಾಗಿ ಗೊತ್ತಾಯ್ತು, ಆ ವ್ಯಕ್ತಿಯ ಉದ್ದೇಶ ನಿಂಗೆ ತೊಂದರೆ ಮಾಡುವುದಲ್ಲ, ನಿನ್ನನ್ನು ಗಮನಿಸುವುದಷ್ಟೇ...'ರಮ್ಯಳೆಂದಳು.

ಖುತುವಿಗೂ ಈ ಘಟನೆಯಿಂದ ಗೊಂದಲವಾಗಿತ್ತು.

ತನ್ನನ್ನು ಗಮನಿಸಿ ಯಾರಿಗೆ ಏನಾಗಬೇಕಾಗಿದೆ....? ಮತ್ತೆ ಮತ್ತೆ ಚಿಕ್ಕಮ್ಮನತ್ತಲೇ ಅನುಮಾನ ಪಡುವಂತಾಗುತ್ತಿದೆ. ತಾನು ಇಲ್ಲಿಗೆ ಬಂದ ಮೇಲೆ ಒಂದು ಬಾರಿಯೂ ತನ್ನ ಮೊಬೈಲಿಗೆ ಅವಳು ಕರೆ ಮಾಡಲಿಲ್ಲ. ಮೊದಲು ತನ್ನ ಜೊತೆ ಅಷ್ಟೊಂದು ಆತ್ಮೀಯವಾಗಿದ್ದ ಚಿಕ್ಕಮ್ಮ ಬದಲಾಗಿದ್ದಾಳೆ. ಇದಕ್ಕೆಲ್ಲಾ ಕಾರಣ ಹೇಮಂತನೊಂದಿಗಿನ ತನ್ನ ಪ್ರೀತಿ....ಪ್ರಣಯ. ಕೊಲೆಗಾರನ ಬಗ್ಗೆ ಸಾಕಷ್ಟು ಸಾಕ್ಷ್ಯಾಧಾರ ಸಿಕ್ಕಿದೆ ಎಂದನಲ್ಲವೇ ಹೇಮಂತ. ಆದಷ್ಟು ಬೇಗ ಈ ಎಲ್ಲಾ ರಗಳೆ ಮುಗಿದು ಅವನ ಕೈ ಹಿಡಿದರೆ ಸಾಕೆನಿಸಿತು ಅವಳಿಗೆ. ತನ್ನ, ಹೇಮಂತನ ನೆಮ್ಮದಿಯನ್ನು ಚಿಕ್ಕಮ್ಮ ಕದಡುತ್ತಿದ್ದಾಳೆ, ಒಂದು ವೇಳೆ ಅವಳು ಆಸ್ತಿಗಾಗಿಯೇ ಹೀಗೆ ಮಾಡಿದ್ದರೆ ಎಲ್ಲವನ್ನೂ ಅವಳೇ ತೆಗೆದುಕೊಂಡು ತನ್ನ ಪಾಡಿಗೆ ತನ್ನನ್ನು ಹೇಮಂತನೊಂದಿಗಿರಲು ಬಿಟ್ಟು ಬಿಡಲಿ ಎಂದುಕೊಂಡಳು.

'ಏನು ಯೋಚಿಸ್ತಿದ್ದಿ ಖುತು?'

ರಮ್ಯಾಳ ಪ್ರಶ್ನೆಗೆ ತಲೆಯಲುಗಿಸಿದಳಷ್ಟೇ.

ಬೆಳಗಿನಿಂದ ವಾತಾವರಣದಲ್ಲಿ ಮೋಡ ಕವಿದಿತ್ತು. ಈಗ ಕಾರ್ಮೋಡಗಳೆಲ್ಲಾ ಒಂದೆಡೆ ಸೇರತೊಡಗಿದ್ದವು. ಯಾವ ಸಮಯದಲ್ಲಿಯಾದರೂ ಜಡಿಮಳೆ ಆರಂಭವಾಗಬಹುದಿತ್ತು.

'ಅರಬ್ಬಿ ಸಮುದ್ರದಲ್ಲಿ ಸೈಕ್ಲೋನ್ ಎದ್ದಿದೆ ಅಂತ ನ್ಯೂಸ್ ಇತ್ತಲ್ಲ, ಅದರ ಎಫೆಕ್ಟ್ ಆಗ್ಲೇ ಶುರುವಾಗಿ ಬಿಡ್ತು, ಬಾ....ಬೇಗ ಹೋಗಿ ಮನೆ ಸೇರಿಕೊಂಡು ಬಿಡೋಣ....' ರಮ್ಯ ಅವಸರ ಅವಸರವಾಗಿ ಗೆಳತಿಯನ್ನು ಹೊರಡಿಸಿಕೊಂಡು ಮೇಲೆದ್ದಳು. ದೇವಸ್ಥಾನವನ್ನು ದಾಟಿ ಇಬ್ಬರೂ ಹೊರಬಂದರು.

ಖುತು ಒಮ್ಮೆ ಹಿಂದಿರುಗಿ ನೋಡಿದಳು. ದ್ರಾವಿಡ ಶೈಲಿಯ ದೇವಾಲಯದ ಹಿನ್ನೆಲೆಯಲ್ಲಿ ದಟ್ಟೈಸಿರುವ ಕಾರ್ಮೋಡಗಳು...ಅದಕ್ಕೂ ಆಚೆ ನಂದಿಬೆಟ್ಟವನ್ನೂ ಒಳಗೊಂಡಂತೆ ಸುತ್ತುವರಿದಿರುವ ಬೆಟ್ಟಗಳ ಸಾಲು....ನಯನ ಮನೋಹರವಾದ ಆ ದೃಶ್ಯವನ್ನು ಕಣ್ತುಂಬಿಕೊಂಡು ಗೆಳತಿಯ ಜೊತೆ ಹೆಜ್ಜೆ ಹಾಕಿದಳು. ಸ್ವಲ್ಪ ದೂರ ನಡೆಯುವಷ್ಟರಲ್ಲಿ ಮಳೆ ಹನಿಯಲು ಆರಂಭಿಸಿತು. ನಿಧಾನವಾಗಿ ಮಳೆ ಹೆಚ್ಚಾಗುವ ವೇಳೆಗೆ ಮನೆಯ ಹತ್ತಿರಕ್ಕೆ ಬಂದಿದ್ದರು. ಖುತು ಹಿಂದಿರುಗಿ ನೋಡಿದಳು. ಹಿಂಬಾಲಿಸುತ್ತಿದ್ದ ಆ ಸಾದು ಎಲ್ಲಿಯೂ ಕಾಣಲಿಲ್ಲ.

'ಬೆಳಗ್ಗಿನಿಂದಲೂ ಮೋಡ ಕವಿದಿತ್ತು. ಇಬ್ರೂ ಬೇಗ ಬರಬೇಕಿತ್ತಲ್ವಾ, ಈಗ ನೋಡಿ ನೆನೆದುಕೊಂಡೇ ಬಂದಿದ್ದೀರಿ...' ದೇವಣ್ಣ ಪ್ರೀತಿಯಿಂದ ಆಕ್ಷೇಪಿಸಿದ.

ಅವರು ಬಟ್ಟೆ ಬದಲಾಯಿಸಿ ಬರುವಷ್ಟರಲ್ಲಿ ಬಿಸಿಯಡುಗೆ ಸಿದ್ಧವಾಗಿತ್ತು. ಹೊರಗೆ ಧಾರಾಕಾರವಾಗಿ ಮಳೆಯೂ ಆರಂಭವಾಗಿತ್ತು.

'ಪಾಪ...ಅಯ್ಯ ಎಷ್ಟು ಹೊತ್ತಿಗೆ ಬರ್ತಾರೋ ಏನೋ, ಈ ಥರ ಜಡಿಮಳೆ ಬೀಳ್ತಿದೆ...' ದೇವಣ್ಣ ಪೇಚಾಡಿಕೊಂಡ.

'ಅಯ್ಯ ಬರೋದು ಎಷ್ಟು ಹೊತ್ತಾಗುತ್ತೋ ಏನೋ, ಊಟ ಮಾಡದೆ ಕಾದ್ರೆ ಅವ್ರಿಗೆ ಇಷ್ಟ ಆಗಲ್ಲ, ನೀವು ಕುಳಿತುಬಿಡಿ, ನಾನು ಬಡಿಸ್ತೀನಿ...'.

ದೇವಣ್ಣನೆಂದಾಗ ಇಬ್ಬರೂ ಒಪ್ಪಿ ಊಟ ಮುಗಿಸಿದರು. ಬೆಳಗ್ಗಿನಿಂದ ಚೆನ್ನಾಗಿ ಅಲೆದಾಡಿದ್ದರಿಂದ ಇಬ್ಬರಿಗೂ ಹಸಿವಾಗಿತ್ತು. ಹೊರಗೆ ಸುರಿಯುತ್ತಿರುವ ಜಡಿಮಳೆಯ ಸದ್ದಿನಲ್ಲಿ ಊಟ ಸೊಗಸಾಗಿತ್ತು.

ದೇವಣ್ಣನನ್ನೂ ಬಲವಂತವಾಗಿ ಕೂರಿಸಿ ಬಡಿಸಿದಳು ರಮ್ಯ. ಅವನದೂ ಊಟವಾದ ಮೇಲೆ ಇಬ್ಬರೂ ತಮ್ಮ ರೂಮಿಗೆ ಹೋಗಿ ವಿಶ್ರಾಂತಿ ಪಡೆದರು. ಮಳೆಯ ಅಬ್ಬರಕ್ಕೆ ಚೆನ್ನಾಗಿ ನಿದ್ರೆಯೂ ಬಂತು.ಎಚ್ಚರವಾಗುವ ವೇಳೆಗೆ ಮಳೆ ಸಂಪೂರ್ಣವಾಗಿ ನಿಂತಿತ್ತು. ಮಧ್ಯಾಹ್ನ ಕಳೆದು ಸಂಜೆ ಮೆಲ್ಲನೆ ಕಣ್ಬಿಡುತ್ತಿತ್ತು. ಆಕಾಶ ಪೂರ್ತಿ ನಿರ್ಮಲವಾಗಿ ಸೂರ್ಯನ ಬಿಸಿಲು ಹಚ್ಚ ಹಸಿರಾದ ಸುತ್ತಲಿನ ಪರಿಸರವನ್ನು ಹಿತವಾಗಿ ಕಾಯಿಸತೊಡಗಿತ್ತು.

ಇಬ್ಬರೂ ಕೆಳಗಿಳಿದು ಬರುವ ವೇಳೆಗೆ ಹರಿಕೃಷ್ಣರೂ ಮನೆಗೆ ಹಿಂದಿರುಗಿದ್ದರು. ಆಗಷ್ಟೇ ಊಟ ಮುಗಿಸಿ ವರಾಂಡದಲ್ಲಿ ವಿಶ್ರಾಂತಿ ಪಡೆಯುತ್ತಾ ಕುಳಿತಿದ್ದವರು ಖುತು, ರಮ್ಯರನ್ನು ನೋಡಿ ಕಣ್ಣರಳಿಸಿದರು.

'ನಿಮ್ದು ಊಟ ಆಯ್ತಾ ಅಪ್ಪಾಜಿ, ದೇವಣ್ಣನಂತೂ ಮಳೆ ಜಾಸ್ತಿಯಾಗಿದ್ದಕ್ಕೆ ಪೇಚಾಡಿಕೊಳ್ತಾ ಇದ್ದ, ನಾನೇ ಬಲವಂತವಾಗಿ ಅವನನ್ನು ಕೂರಿಸಿ ಊಟ ಬಡಿಸಿದೆ.'

ರಮ್ಯಳ ಮಾತಿಗೆ ಅಲ್ಲೇ ತನ್ನ ಕೆಲಸಗಳಲ್ಲಿ ತೊಡಗಿಕೊಂಡಿದ್ದ ದೇವಣ್ಣನತ್ತ ಹರಿಕೃಷ್ಣರು ಮೆಚ್ಚುಗೆಯಿಂದ ನೋಡಿದರು.

ಸಾಧು ಜೀವಿ...ಅವನು ತಮ್ಮ ಆಶ್ರಯಕ್ಕೆ ಬಂದಾಗ ರಮ್ಯ ಇನ್ನೂ ಎರಡು ಎರಡು ವರ್ಷದ ಹಸುಗೂಸು. ಹೆಂಡತಿಯ ಅಗಲಿಕೆಯಿಂದ ಕಂಗೆಟ್ಟಿದ್ದ ತಾನು ಮಗಳ ಯೋಗಕ್ಷೇಮವನ್ನು ಪೂರ್ತಿಯಾಗಿ ನಿರ್ಲಕ್ಷಿಸಿಯಾಗಿತ್ತು. ಆ ಸಮಯದಲ್ಲಿ ಅಡುಗೆಯ ಕೆಲಸವನ್ನು ಕೇಳಿಕೊಂಡು ಬಂದ ದೇವಣ್ಣ ಪೂರ್ತಿ ಮನೆಯವನಾಗಿಯೇ ಬದಲಾಗಿ ಹೋದ. ಮದುವೆಯಾದ ವರ್ಷದೊಳಗೆ ಹೆಂಡತಿ ತೀರಿಕೊಂಡಿದ್ದರಿಂದ ಜೀವನದಲ್ಲಿ ಜಿಗುಪ್ಸೆಗೊಂಡು ಊರು ಬಿಟ್ಟವನಂತೆ ಅವನು. ಶೃಂಗೇರಿಯ ಕಡೆಯವನಾದ ಅವನು ಈಗಲೂ ವರ್ಷಕ್ಕೊಮ್ಮೆ ಶೃಂಗೇರಿಯ ಶಾರದೆ, ಹೊರನಾಡಿನ ಅನ್ನಪೂರ್ಣೆ, ಕೊಲ್ಲೂರ ಮೂಕಾಂಬಿಕೆ ಎಂದೆಲ್ಲಾ ಒಂದು ವಾರದ ಮಟ್ಟಿಗೆ ಶ್ರೀ ಕ್ಷೇತ್ರಗಳ ದರ್ಶನ ಮಾಡಿಕೊಂಡು ಬಂದು ಬಿಟ್ಟರೆ ಮುಗಿಯಿತು. ಅವನಲ್ಲಿ ಮತ್ಯಾವುದೇ ಕೋರಿಕೆಗಳಿಲ್ಲ. ತಾಯಿ ಇಲ್ಲದ ಮಗು ರಮ್ಯಾಳಿಗೆ ತಾಯಿಯಾಗಿ, ತನಗೆ ವಾತ್ಸಲ್ಯದ ಸಹೋದರನಾಗಿ, ಈ ಮನೆಯ ಅನಿವಾರ್ಯವಾಗಿರುವ ದೇವಣ್ಣನೆಂದರೆ ತನಗೂ ಪ್ರೀತಿ, ಅಭಿಮಾನವೇ.

ಈಗ ಹರಿಕೃಷ್ಣರ ದೃಷ್ಟಿ ಖುತುವಿನತ್ತ ಹೊರಳಿತು. ಬಂದ ಎರಡೇ ದಿನಕ್ಕೆ ಮನೆ ಮಗಳಂತೆ ಹೊಂದಿಕೊಂಡ ಅವಳ ಬಗ್ಗೆ ಅಚ್ಚರಿಯಾಯಿತು. ಅದ್ಯಾವ ಋಣಾನುಬಂಧವೋ....ಅವಳನ್ನು ನೋಡಿದರೆ ಮಮತೆ ಉಕ್ಕುತ್ತದೆ, ರಮ್ಯಾಳಿಗೆ ಇಂಥ ಹುಡುಗಿಯ ಗೆಳೆತನವಾಗಿದ್ದಕ್ಕೆ ಸಂತೋಷವೆನಿಸಿತು.

'ಬಾ ಖುತು ಕೂತ್ಕೋ, ನಮ್ಮ ಊರು, ನಮ್ಮ ಪ್ರಕೃತಿ ಎಲ್ಲಾ ನಿಂಗಿಷ್ಟವಾಯ್ತಾ, ಯೋಗ ಶಾಲೆಯನ್ನು ನೋಡಿ ನಿಂಗೇನನ್ನಿಸ್ತು...' ಅವರ ಆತ್ಮೀಯತೆಯ ಪ್ರಶ್ನೆಗಳಿಗೆ ಉತ್ತರಿಸಲಾರದೆ ಮೂಕಳಾದಳು. ಇಲ್ಲಿನ ಪರಿಸರ, ಇಲ್ಲಿನವರ ಆತ್ಮೀಯತೆ, ಯೋಗಶಾಲೆಯ ಭವ್ಯತೆ ಮನಸ್ಸನ್ನು ತುಂಬಿರುವಾಗ ಆ ಆನಂದವನ್ನು ಮಾತುಗಳಲ್ಲಿ ವರ್ಣಿಸಲು ಸಾಧ್ಯವಿಲ್ಲವಲ್ಲ.

'ಏಕೆ ಖುತು, ಏನೂ ಮಾತಾಡ್ತಿಲ್ಲ?....' ಮತ್ತೆ ಅವರಿಂದ ಪ್ರಶ್ನೆ ತೂರಿ ಬಂದಾಗ ಅವಳು ಏನಾದರೂ ಉತ್ತರಿಸಲೇಬೇಕಿತ್ತು.

'ಅಪ್ಪಾಜಿ, ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡೋಕೆ ಕಷ್ಟವಾಗುತ್ತೆ, ಇಲ್ಲಿ ಬಂದ್ಮೇಲೆ ನಾನು ತುಂಬಾ ಖುಷಿಯಾಗಿದ್ದೀನಿ. ನಾನು ಕಳೆದುಕೊಂಡಿದ್ದನ್ನೆಲ್ಲಾ ಇಲ್ಲಿ ಪಡೆದಿದ್ದೀನಿ ಅನ್ನೋ ಭಾವನೆ ನಂಗೆ ಬಂದಿದೆ, ನಿಜ ಹೇಳಬೇಕಂದ್ರೆ ನಂಗೆ ಇಲ್ಲಿ ಬರುವ ತನಕವೂ ಯೋಗದ ಬಗ್ಗೆ ಇಂಟರೆಸ್ಟೇ ಇರ್ಲಿಲ್ಲ ಅಪ್ಪಾಜಿ, ಆದ್ರೆ ಇಲ್ಲಿಗೆ ಬಂದ್ಮೇಲೆ ನಿಮ್ಮ ವ್ಯಕ್ತಿತ್ವವನ್ನೂ, ಯೋಗಶಾಲೆಯನ್ನೂ ನೋಡಿದ್ಮೇಲೆ ಯೋಗದ ಬಗ್ಗೆ ಆಸಕ್ತಿ ಬರ್ತಿದೆ....' ರಮ್ಯಳ ಜೊತೆ ಕುಳಿತುಕೊಳ್ಳುತ್ತಾ ಹೇಳಿದಳು ಖುತು.

'ಹೌದು ಖುತು, ಈ ಯೋಗವೇ ಹೀಗೆ, ಒಂದು ಸಮುದ್ರವಿದ್ದ ಹಾಗೆ, ಇದನ್ನು ಆನಂದದ ಸಮುದ್ರ ಅಂತ ಕರೆಯಬಹುದೇನೋ, ಒಮ್ಮೆ ಈ ಸಮುದ್ರದಲ್ಲಿ ಕಾಲಿಟ್ರೆ ಸಾಕು ಆನಂದದ ಅಲೆಗಳು ಆವರಿಸಿಕೊಳ್ಳುತ್ತಲೇ ಹೋಗುತ್ತೆ....' ದೈವೀಕವಾಗಿ ಪ್ರಜ್ವಲಿಸುತ್ತಿದ್ದ ಹರಿಕೃಷ್ಣರ ಕಣ್ಣುಗಳನ್ನೇ ನೋಡಿದ ಖುತುವಿಗೆ ಅವರ ಮಾತು ನಿಜವೆನಿಸಿತು. ಪರಕೀಯರ ನಿರಂತರ ದಾಳಿಯಿಂದ ನಮ್ಮ ದೇಶದಲ್ಲಿ ಈ ಯೋಗಪದ್ಧತಿ ಮೂಲೆಗುಂಪಾಗಿತ್ತು. ಆದರೀಗ ಜನರು ನಿಧಾನವಾಗಿಯಾದರೂ ಇದರ ಮಹತ್ವವನ್ನು ತಿಳಿದುಕೊಳ್ತಿದಾರೆ. ಆಸನ....ಪ್ರಾಣಾಯಾಮ....ಧ್ಯಾನ....ಇವು ಮೂರನ್ನು ಸರಿಯಾಗಿ ಮಾಡಿಕೊಳ್ಳುತ್ತಾ ಹೋದರೆ ರೋಗಗಳು ಬರದಂತೆ ತಡೆಯ ಬಹುದು, ಬಂದ ರೋಗವನ್ನು ದೂರ ಮಾಡಿಕೊಳ್ಳಬಹುದು, ದೈನಂದಿನ ಜಂಜಾಟದಲ್ಲಿ ಕಂಗೆಡುವ ಮನಸ್ಸಿಗೆ ಶಾಂತಿಯನ್ನು ತಂದು ಕೊಡಬಹುದು... ಆದರೆ ಎಲ್ಲದಕ್ಕೂ ಶ್ರದ್ಧೆ ಮುಖ್ಯ ಅಲ್ವಾ ಖುತು, ಅದಿಲ್ಲದಿದ್ರೆ ಯಾವ ವಿದ್ಯೆಯೂ ಸರಿಯಾದ ಫಲ ಕೊಡಲ್ಲ....

(ಸಶೇಷ)